# ಆತಂಕಗಳಿಗೆ ಉತ್ತರ ಹುಡುಕುವ ತವಕ



'ಸಾಹಿತ್ಯಕ ಚಳವಳಿಗಳನ್ನು ಪ್ರಭಾವಿಸಿ ರೂಪಿಸಿದ ಸಾಮಾಜಿಕ–ರಾಜಕೀಯ ಚಳವಳಿಗಳು ಈಗಿಲ್ಲ, ಆದ್ದರಿಂದಲೇ ಹೊಸ ತಲೆಮಾರಿನ ಬರಹಗಾರರಿಗೆ ಗೊತ್ತುಗುರಿಗಳಿಲ್ಲ' ಎಂಬ ಹಳಹಳಿಕೆ ಕೇಳುತ್ತಿದೆ. ಹಾಗೆಯೇ 'ಸದ್ಯ ಈಗ ಸಿದ್ಧಾಂತಗಳ ರಾದ್ಧಾಂತ ಇಲ್ಲ, ಬರಹಗಾರರೆಲ್ಲ ಸರ್ವಸ್ವತಂತ್ರ' ಎಂಬ ಹುಸಿ ಕನವರಿಕೆಯೂ ನಮ್ಮ ನಡುವೆ ಇದೆ. ಆದರೆ ಇತಿಹಾಸ ನಮಗೆ ತಿಳಿಸಿರುವ ಹಾಗೆ, ಚಳವಳಿಗಳು ಮತ್ತು ಅದರ ಸಿದ್ಧಾಂತಗಳು ಪ್ರತಿದಿನ ಬೀದಿಯಲ್ಲಿ ಕಾಣುವುದಿಲ್ಲ, ಬೇಕಾದಾಗ ಬಳಸಲು– ಬಿಡಲು ಅಂಗಡಿಯಲ್ಲೂ ಸಿಗುವುದಿಲ್ಲ. ಚಳವಳಿ, ಹೋರಾಟ, ಪ್ರತಿರೋಧ ಇವೆಲ್ಲವೂ ಸಮಾಜದೊಳಗೆ ಸದಾ ಹರಿಯುವ ಅಂತರ್ವಾಹಿನಿ. ಹರಿಯುವ ಯಾವುದಕ್ಕೂ ಉಬ್ಬರವಿಳಿತ ಇರುತ್ತದಷ್ಟೆ.

ಶ್ರೇಣೀಕರಣ, ವಸಾಹತೀಕರಣ ಮುಂತಾದ ಅನೇಕ ಶೋಷಣೆಗಳ ವಿರುದ್ಧ ಹೋರಾಡಲು ಪರಿಕರಗಳನ್ನು ರೂಪಿಸಿಕೊಂಡ ಸಮಾಜ, ಈಗ ಜಾಗತೀಕರಣ ಮತ್ತು ಮತಭ್ರಾಂತೀಕರಣ ತಂದೊಡ್ಡುತ್ತಿರುವ ಆತಂಕಗಳನ್ನು ಎದುರಿಸಲು ಸನ್ನದ್ಧವಾಗಲಾರದೇ? ಆ ಪ್ರಕ್ರಿಯೆಯಲ್ಲಿ ಮೂಡುವ ಹೊಸ ರಾಜಕೀಯ ಸಾಮಾಜಿಕ ಸಾಂಸ್ಕೃತಿಕ ಹೊಳಹುಗಳು ಸಾಹಿತ್ಯದ ಎದೆಗೆ ಅಕ್ಷರಗಳಾಗಿ ಬೀಳಲಾರವೇ? ನಂಬೋಣ, ನಮ್ಮೆಲ್ಲ ಚಳವಳಿಗಳ ಚರಿತ್ರೆಗೆ ಖಂಡಿತ ಮುಂದಿನ ಅಧ್ಯಾಯಗಳಿವೆ!

ಈ ಸಂಚಿಕೆಯ ವಿಶೇಷಗಳಾದ ಚಿನುವ ಅಚೀಬೆ ಅವರ ಸಾಹಿತ್ಯ ಸೃಷ್ಟಿ ಕುರಿತ ಲೇಖನ ಮತ್ತು ನೆಲ್ಸನ್ ಮಂಡೇಲಾ ಅವರ ಹೋರಾಟದ ಬದುಕನ್ನು ಹೇಳುವ ಬರಹಗಳು ನಮ್ಮ ಇಂಥ ತವಕ ತಲ್ಲಣಗಳಿಗೆ ಏನಾದರೂ ಉತ್ತರ ಸೂಚಿಸುತ್ತವೆ ಎಂಬ ನಂಬಿಕೆ 'ಮಯೂರ' ಕ್ಕೆ ಇದೆ.

**–ಆರ್. ಪೂರ್ಣಿಮಾ**